ಹೇಳಬೇಕಾದರೆ ಅದೇನಾದರೂ ಈ ಸದನದ ಹಕ್ಕಿಗೆ ಚ್ಯುತಿ ಬಂದಾಗ ಆದು ಈ ಸದನದ ಪ್ರಶ್ನೆಯಾಗಿ ಬರುತ್ತದೆ. ಆದನ್ನು ವಿರೋಧ ಪಕ್ಷದ ಎಲ್ಲರೂ ಅನ್‌ಕಂಡೀಷನ್ ಆಗಿ, ಅಬ್ಸ್‌ಲ್ಯೂಟ್ ಆಗಿ ವರದಿ ಮಾಡಿದ್ದರಿಂದ ಹೇಳಬೇಕಾಗಿದೆ. ''Opposition as a class''–the prestige of the Members have beeu diminished by such remarks in the editorial. In view of that there is a strong case, forcible case sofar as the prestige and privileges of the Members are concerned. It is for the Hon'ble Speaker to take an appropriate step in this behalf.

MR. SPEAKER.—I have heard and reserved my Ruling. Let us go to the next subject.

ಮಂನವಿಗಳು

ಲೋಕೋಪಯೋಗಿ ಇಲಾಖೆಯಲ್ಲಿ ನೌಕರರನ್ನು ಖಾಯಂ ಗೊಳಿಸುವ ಬಗ್ಗೆ.

ಶ್ರೀ ಎಸ್. ಸೂರ್ಯನಾರಾಯಣರಾವ್,—ಮಾನ್ಯ ಅಧ್ಯಕ್ಷರೇ, ೧೬ನೇ ತಾರೀಖಿನಿಂದಲೂ ಲೋಕೋಪಯೋಗಿ ಇಲಾಖೆಯಲ್ಲಿರುವ ನೌಕರರು ತಮ್ಮ ಬೇಡಿಕೆಗಳ ಬಗ್ಗೆ ಅನಿರ್ದಿಷ್ಟಕಾಲ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ.ಆ ವಿಚಾರವಾಗಿ ನಿನ್ನೆಯೂ ಸಹ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಮತ್ತು ಇದರ ಬಗ್ಗೆ ನಾನು ಒಂದು ನೋಟೀಸ್‌ನ್ನೂ ಸಹ ಕಳುಹಿಸಿದ್ದೇನೆ. ಅವರನ್ನು ಖಾಯಂಗೊಳಿಸುವ ಬಗ್ಗೆ ಕೇಳಿದ್ದೇನೆ. ಈಗ ಈ ಸಭೆಯಲ್ಲಿ ಮಾನ್ಯ ಲೋಕೋಪಯೋಗಿ ಇಲಾಖಾ ಮಂತ್ರಿಗಳು ಇರುವುದರಿಂದ ಅದಕ್ಕೆ ಸೂಕ್ತ ಉತ್ತರ ಹೇಳಬೇಕಾಗಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ನನ್ನ ಹತ್ತಿರ ಈಗ ಲಿಖಿತ ಉತ್ತರ ಇಲ್ಲ. ಈದಿನ ಅಜೆಂಡಾದಲ್ಲಿ ಇಲ್ಲದೇ ಇದ್ದುದರಿಂದ ಅದನ್ನು ನಾನು ತರಲಿಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಇದರ ಬಗ್ಗೆ ಲಿಖಿತ ಉತ್ತರ ಇದ್ದರೆ ಚೆನ್ನಾಗಿತ್ತು.

ಶ್ರೀ ಹೆಚ್.ಡಿ. ದೇವೇಗೌಡ.—ಲಿಖಿತ ಉತ್ತರ ಇಲ್ಲದೇ ಹೋದರೂ ತಮಗೆ ಸಮಾಧಾನವಾಗುವ ಹಾಗೆನೇ ಉತ್ತರ ಹೇಳುತ್ತೇನೆ, ಸಂಶಯ ಬೇಡ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಆಗಬಹುದು, ಹೇಳಿ.

ಶ್ರೀ ಹೆಚ್.ಡಿ. ದೇವೇಗೌಡ.—ಪತ್ರಿಕೆಯಲ್ಲಿ ವರದಿಯಾಗಿರತಕ್ಕಂಥಾ ಅಂಶ ದಿನಗೂಲಿ ನೌಕರರಿಗೆ ಸ್ವಲ್ಪ ಆ ಸಮಾಧಾನವಾಗಿದೆ ಎಂದು ಮತ್ತು ಈ ಬಗ್ಗೆ ವಿಷಯಗಳನ್ನು ಮಾನ್ಯ ಎಸ್. ಸೂರ್ಯನಾರಾಯಣರಾವ್ ಹಾಗೂ ಮಾನ್ಯ ಎಂ.ಎನ್. ಕೃಷ್ಣಪ್ಪರವರೂ ಕೂಡ ಪ್ರಸ್ತಾಪ ಮಾಡಿದ್ದನ್ನು ನಾನು ಕೇಳಿದ್ದೇನೆ. ಅದಕ್ಕೆ ಸ್ಪಷೀಕರಣ ನಾನು ನೀಡುವುದಕ್ಕೆ ಬಯಸುತ್ತೇನೆ. ಅವರು ಮಾಡುತ್ತಾ ಇರತಕ್ಕಂಥಾ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸುವುದಕ್ಕೆ ಇದರಿಂದ ಅವಕಾಶವಾಗಬಹುದು ಎಂದು ನಾನು ತಿಳಿದಿದ್ದೇನೆ. ಮಾನ್ಯ ಅಧ್ಯಕ್ಷರೂ ಸಹ ಇದರ ಬಗ್ಗೆ ಸ್ಪಷ್ಟೀಕರಣ ನೀಡುವುದಕ್ಕೆ ಅಪ್ಪಣೆ ಕೊಟ್ಟಿರುವುದರಿಂದ ನಾನು ಮತ್ತೊಮ್ಮೆ ಈ ಸಭೆಗೆ ಸ್ಪಷ್ಟೀಕರಣ ಕೊಡಲು ಇಚ್ಛಿಸುತ್ತೇನೆ. ಈ ಲೋಕೋಪಯೋಗಿ ಇಲಾಖೆಯಲ್ಲಿ ೧೪೫೩೦ ಜನ ಏನು ಇದ್ದಾರೆ ಅವರಲ್ಲಿ ೧೦೬೦೦ ಜನ ಗ್ಯಾಂಗ್ ಮನ್‌ಗಳನ್ನು ಖಾಯಂ ಗೊಳಿಸತಕ್ಕದ್ದರ ಬಗ್ಗೆ ವರದಿಯಾಗಿದ್ದರೂ ಕೂಡ ಅದರ ಪೂರ್ಣ ವರದಿ ಇನ್ನೂ ಆಗಿಲ್ಲ. ಆದರೆ ಈಗ ನಾನು ಅದರ ಸಂಪೂರ್ಣ ವಿವರಣೆಯನ್ನು ಕೊಟ್ಟು ಮೇಲಾದರೂ ಕೂಡ ನಮ್ಮ ಮಿತ್ರರು ಏನು ಸತ್ಯಾಗ್ರಹ ಮಾಡುತ್ತಿದ್ದಾರೆ ಅವನ್ನು ಕೈಬಿಡಬಹುದು ಎಂದು ತಿಳಿಸಿದ್ದೇನೆ. ಈ ಗ್ಯಾಂಗಮನ್‌ಗಳು ೧-೪-೧೯೮೧ ರಿಂದ ೧-೪೧-೧೯೮೨ರ ವರೆಗೆ ೨೪೦ ದಿವಸ ಕೆಲಸ ಮಾಡಿದ್ದರೆ ಸಾಕು, ೫ ವರ್ಷದ ಮೇಲ್ಪಟ್ಟು ಯಾರು ಕೆಲಸ ಮಾಡಿರುತ್ತಾರೋ ಅವರಿಗೆಲ್ಲಾ ಖಾಯಂ ಗೊಳಿಸುವ ಹಾಗೆ ನಿರ್ಧಾರ ತೆಗೆದುಕೊಂಡಿದ್ದೇವೆ, ಆದರೆ ಪರಿಶಿಷ್ಟ ವರ್ಗದವರಿಗೆ ೫ ವರ್ಷ ಆಗಿರಬೆಕು ಅನ್ನುವುದು ಅಪ್ಲೈ ಆಗುವುದಿಲ್ಲ. ೨೪೦ ದಿವಸ ಅವರು ಕೆಲಸ ಮಾಡಲೇ ಬೇಕಾಗುತ್ತದೆ. ಅವರು ಒಂದು ವರ್ಷ ಕೆಲಸ ಮಾಡಿದರೆ ಸಾಕು ಖಾಯಂ ಆಗುವ ಹಾಗೆ ತೀರ್ಮಾನ ತೆಗೆದುಕೊಂಡಿದ್ದೇವೆ. ಅಲ್ಲದೆ ಅವರಿಗೆ ಇದರ ಬಗ್ಗೆ ರೋಸ್ಟರ್ ಕೂಡ ಅಪ್ಲೈ ಆಗಬೇಕಾದ್ದೇನೂ ಇಲ್ಲ.

ಇನ್ನು ಸೌಡಿಗಳ ವಿಚಾರದ ಬಗ್ಗೆ ಹೇಳಬೇಕಾದರೆ, ಅವರನ್ನು ಎಷ್ಟು ಹುದ್ದೆಗಳಿಗೆ ನೇಮಕ ಮಾಡಬೇಕು ಎನ್ನುವುದು ಇನ್ನೂ ಖಚಿತವಾಗಿಲ್ಲ. ೧೦೦ ಎಕರೆಗೆ ಒಬ್ಬರು ಸೌಡಿ ಇರಬೇಕೋ, ಅಥವಾ ೫೦ ಎಕರೆಗೆ ಒಬ್ಬರು ಸೌಡಿ ಇರಬೇಕೋ ಅದರ ಬಗ್ಗೆ ಇನ್ನೂ ಒಂದು ಖಚಿತವಾದ ನಿರ್ಣಯವನ್ನು ಮಾಡಿಲ್ಲ. ಇದರ ಬಗ್ಗೆ ಒಂದು ವರದಿ ಕೊಡಲು ಸರ್ಕಾರದ ವಿಶೇಷ ಕಾರ್ಯದರ್ಶಿಗಳ ಅಂದರೆ ನೀರಾವರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನೇಮಕ ಮಾಡಿದ್ದೇವೆ. ಸಾಮಾನ್ಯವಾಗಿ ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ಹೆಚ್ಚು ಹೆಚ್ಚು ನೀರಾವರಿ ಪ್ರದೇಶಗಳು ಆಗುತ್ತಿರುವುದರಿಂದ ಅವೆಲ್ಲಕ್ಕೂ ಎಷ್ಟು ಸೌಡಿಗಳು ಬೇಕು, ಇದರಲ್ಲಿ ದೊಡ್ಡ ದೊಡ್ಡ ಕೆರೆಗಳಿಗೂ ಅನ್ವಯಿಸುತ್ತದೆ, ಮೈನರ್ ಟ್ಯಾಂಕ್ ಮೇಜರ್ ಟ್ಯಾಂಕ್ಸ್ ಸಹ ಬರುತ್ತದೆ, ಇವಕ್ಕೆಲ್ಲಾ ಎಷ್ಟೆಷ್ಟು ಬೇಕಾಗುತ್ತದೆ ಅನ್ನುವುದನ್ನು ನೋಡಿಕೊಂಡು ನಾವು ಪ್ರತ್ಯೇಕವಾಗಿ ಮಂಜೂರಾತಿ ಕೊಡಬೇಕಾಗುತ್ತದೆ. ಒಟ್ಟಿನಲ್ಲಿ ಹೇಳಬೇಕಾದರೆ, ಈಗ ಇರತಕ್ಕಂಥಾ ರೌಡಿಗಳನ್ನೂ ಸಹ ಖಾಯಂಗೊಳಿಸುವುದಕ್ಕೆ ಸರ್ಕಾರದ ಒಪ್ಪಿಗೆ ಇದೆ ಎಂದು ಹೇಳ ಬಯಸುತ್ತೇನೆ, ಆದುದ ರಿಂದ ತಾವು ಇದರ ಬಗ್ಗೆ ಏನೂ ಸಂಶಯಪಟ್ಟು ಕೊಳ್ಳಬೇಡಿ. ಅವರನ್ನು ಯಾವ ಒಂದು ಕ್ಯಾಟಗರಿ ಯಲ್ಲಿ ನೇಮಕ ಮಾಡಿಕೊಳ್ಳಬೇಕು ಎನ್ನುವುದು ಸರ್ಕಾರದ ವರದಿ ಬಂದಮೇಲೆ ಹೊಸದಾಗಿ ಅವರಿಗೆ ಮಂಜೂರಾತಿ ಕೊಡಬೇಕಾಗುತ್ತದೆ. ಆದರೆ ನಾವು ಗ್ಯಾಂಗ್‌ಮನ್‌ಗಳಿಗೆ ಯಾವ ಒಂದು ಶರತ್ತುಗಳನ್ನು ಹಾಕಿದ್ದೇವೋ ಅದೇ ಶರತ್ತುಗಳ ಪ್ರಕಾರ ಅವರನ್ನು ಖಾಯಂಗೊಳಿಸುತ್ತೇವೆ. ಪರಿಶಿಷ್ಟ ವರ್ಗದವರು ಏನು ಇದ್ದಾರೆ ಅವರಿಗೆ ರೋಸ್ಟರ್ ಅಪ್ಲೈ ಆಗುವುದಿಲ್ಲ, ೫ವರ್ಷ ಮೇಲ್ಪಟ್ಟು ಇರಬೇಕು ಅನ್ನು ವುದೂ ಸಹ ಅಪ್ಲೈ ಆಗುವುದಿಲ್ಲ. ಆದರೆ ೨೪೦ ದಿವಸ ಕೆಲಸ ಮಾಡಬೇಕು. ಗ್ಯಾಂಗ್‌ಮನ್ಸ್‌ಗೆ ಏನು ಷರತ್ತುಗಳು ಅನ್ವಯವಾಗುತ್ತದೋ ಅದೇ ಶರತ್ತುಗಳು ಇವರಿಗೂ ಅನ್ವಯವಾಗುತ್ತದೆ. ಇನ್ನು ಈ ಲೋಕೋಪಯೋಗಿ ಇಲಾಖೆಯಲ್ಲಿ ಚಾಲಕರು, ಕ್ಲೀನರ್ ಮೇಟಿಗಳು, ವಾಚ್‌ಮನ್ಸ್, ಗಾರ್ಡನ್ಸ್ ಟೆಲಿಫೋನ್ ಆಪರೇಟರ್ಸ್, ಮಿಷನ್ ಆಪರೇಟರ್ಸ್ ಹೆಲ್ಪರ್ಸ್ ಇತ್ಯಾದಿ ಎಷ್ಟೋ ವರ್ಗಗಳು ಇವೆ, ಬೇಕಾದಷ್ಟು ವರ್ಗಗಳು ಇವೆ. ಅವರಿಗೆಲ್ಲಾ ಇದು ಅನ್ವಯವಾಗುತ್ತದೆ. ಹುದ್ದೆಗಳ ಹೆಸರುಗಳನ್ನೆಲ್ಲಾ ನಾನು ಈಗ ಹೇಳಬೇಕಾದ್ದಿಲ್ಲ. ನಾವು ಆ ವರ್ಗಗಳಿಗೇನೆ ಪ್ರತ್ಯೇಕವಾಗಿ ಮಂಜೂರಾತಿ ಕೊಡಬೇಕಾಗುತ್ತದೆ ಒಟ್ಟಿನಲ್ಲಿ ತಮಗೆ ಹೇಳಬೇಕಾದರೆ ನಾವು ಯಾರನ್ನೂ ಕೂಡ ಮನೆಗೆ ಕಳುಹಿಸುವುದಿಲ್ಲ ಎಂದು ಹೇಳು ತ್ತೇನೆ. ಆದರೆ ಅವರಿಗೆ ಒಂದು ಪ್ರತ್ಯೇಕ ಹುದ್ದೆಗಳನ್ನು ಮಾಡಿ ಕನ್‌ಸಾಲಿಡೇಟೆಡ್ ಆಗಿ ೩೦೦ ರೂ.ಕೊಡಬೇಕಾಗುತ್ತದೆ. ಇದರಲ್ಲೂ ಸಹ ಕೆಲವರೆಲ್ಲವೂ ೧೧-೧೫ ವರ್ಷ ಸರ್ವಿಸ್ ಮಾಡಿದವರು ಇರುತ್ತಾರೆ ಡ್ರೈವರ್‌ನ್ನಾಗಲಿ ಹೆಲ್ಪರ್‌ನ್ನಾಗಲಿ ಯಾರನ್ನೂ ಸಹ ಮನೆಗೆ ಕಳುಹಿಸುವುದಿಲ್ಲ. ಎಲ್ಲರನ್ನು ಖಾಯಂ ಮಾಡುತ್ತೇವೆ. ಇದರ ಬಗ್ಗೆ ನಾನು ಈಗಾಗಲೇ ಫೈನಾನ್ಸ್ ಡಿಪಾರ್ಟ್‌ಮೆಂಟ್ ಜೊತೆ ಸಂಪರ್ಕ ಮಾಡಿದ್ದೇನೆ. ಎಷ್ಟು ಡ್ರೈವರ್‌ಗಳ ಹುದ್ದೆಗಳನ್ನು, ಎಷ್ಟು ಕ್ಲೀನರ್ ಹುದ್ದೆಗಳನ್ನು ನಾವು ಸ್ಕ್ರಾಂಕ್ಷನ್ ಮಾಡಬೇಕಾಗುತ್ತದೆ ಎನ್ನುವುದನ್ನು ನೋಡಿಕೊಂಡು ಮಾಡಬೇಕು. ಮತ್ತು ಆ ಹುದ್ದೆಗಳಿಗೇನೇ ಪ್ರತ್ಯೇಕವಾದ ಒಂದು ಕೇಡರ್ ಮಾಡಿ ಮಂಜೂರಾತಿ ತೆಗೆದುಕೊಳ್ಳಬೇಕಾಗುತ್ತದೆ. ಈ ದಿಶೆಯಲ್ಲಿ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆ. ಆದುದರಿಂದ ಮಾನ್ಯ ಸದಸ್ಯರು ಇದರ ಬಗ್ಗೆ ಏನೂ ಸಂಶಯಪಡಬೇಕಾದ್ದಿಲ್ಲ ಎಂದು ಹೇಳುತ್ತೇನೆ. ಈಗ್ಗೆ ೩ ತಿಂಗಳಿನಲ್ಲೋ ಅಥವಾ ೬ ತಿಂಗಳಿನಲ್ಲೋ ಈ ಬಗ್ಗೆ ನೇಮಕ ಮಾಡಿರತಕ್ಕಂಥಾ ಸಮಿತಿಗೆ ಒಂದು ಗಡುವು ಫಿಕ್ಸ್ ಮಾಡಿದ್ದೇವೆ. ಪ್ರಕಾರ ೧-೪-೧೯೮೨ ರಿಂದ ಈಚೆಗೆಯಾರು ಸೇರಿಕೊಂಡಿದ್ದಾರೋ ಅವರಿಗೆ ಇದು ಅನ್ವಯವಾಗುವುದಿಲ್ಲ. ಅವರನ್ನೆಲ್ಲಾ ತೆಗೆದುಹಾಕಂತ್ತೇವೆ. "contrary to the decision taken by the Government" ತೆಗೆದುಕೊಳ್ಳುವುದನ್ನು ಅದನ್ನು ಬ್ಯಾನ್ ಮಾಡಿದ್ದೇವೆ. ೫ ವರ್ಷದ ಮೇಲ್ಪಟ್ಟು ಇರುವವರನ್ನು ನಾವೇನು ಖಾಯಂ ಮಾಡುತ್ತೇವೋ ಅದರಲ್ಲಿ ಇನ್ನೂ ಏನಾದರೂ ಸ್ವಲ್ಪ ಜನ ಉಳಿದುಕೊಂಡಿದ್ದರೆ ಅಂಥಾವರನ್ನು ಹಂತಹಂತವಾಗಿ ಖಾಯಂ ಮಾಡುತ್ತೇವೆ.

ಶ್ರೀ. ಎಂ. ಆನಂದರಾವ್.—ಸ್ವಾಮಿ, ಶಿವಮೊಗ್ಗದ ಗ್ಯಾರೇಜಿನಲ್ಲಿ ಕೆಲಸ ಮಾಡತಕ್ಕ ಕೆಲ ವರನ್ನು ರಿಟ್ರೆಂಚ್ ಮಾಡಿದ್ದಾರೆ.

ಶ್ರೀ ಎಚ್.ಡಿ. ದೇವೇಗೌಡ—೧-೪-೧೯೮೨ರ ಪೂರ್ವದಲ್ಲಿ ೨೪೦ ದಿವಸದವರೆಗೆ ಕಂಟೀನ್ಯೂಯಸ್ ಆಗಿ ಕೆಲಸ ಮಾಡಿದ್ದರೆ ಅವರನ್ನು ಪುನಃ ನೇಮಕ ಮಾಡಿಕೊಳ್ಳುತ್ತೇವೆ. ಇದರ ಬಗ್ಗೆ ಮಾನ್ಯ ಸದಸ್ಯರು ಸಂಶಯಪಡಬೇಕಾಗಿಲ್ಲ. ಆಮೇಲೆ ಇದರಲ್ಲಿ ನಾವು ಪರ್ಸೆಂಟೇಜನ್ನೂ ಸಹ ಲೆಕ್ಕ ಹಾಕಿದ್ದೇವೆ

ಗ್ಯಾಂಗ್‌ಮನ್, ಸ್ವೀಡೀಸ್, ಮತ್ತಿತರರು ಸೇರಿದರೆ ಒಟ್ಟು ೨೨,೯೧೩ ಜನರು ಇದ್ದಾರೆ, ಇದರಲ್ಲಿ ಎಸ್. ಸಿ. ೩೮೭೪ ಜನರು, ಎಸ್. ಟಿ. ೧೯೧೧ ಜನರು ಇದ್ದಾರೆ. ಒಟ್ಟು ಇವರು ೨೨ ಪರ್ಸೆಂಟ್ ಬರುತ್ತಾರೆ. ಇವರಾರೂ ಕೂಡ ಭಯಪಡಬೇಕಾಗಿಲ್ಲ. ಈ ವರ್ಗದವರಿಗೆ ಐದು ವರ್ಷದ ನಿಯಮ ಅಪ್ಲೈ ಆಗುವುದಿಲ್ಲ ಇವರುಗಳು ೨೪೦ ದಿವಸ ಸೇವೆ ಸಲ್ಲಿಸಿದ್ದರೆ ಅವರನ್ನು ಖಾಯಂ ಮಾಡುತ್ತೇವೆ. ಮಾನ್ಯ ಸದಸ್ಯರಾದ ಸೂರ್ಯನಾರಾಯಣರಾವ್ ಅವರಿಗೂ ನಮಗೂ ಇಲ್ಲಿ ಬಂದಿರತಕ್ಕ ಜಿಜ್ಞಾಸೆ ಏನೆಂದರೆ, ಕೆಲವರನ್ನು ಈ ಇಲಾಖೆಯಲ್ಲಿ ಲಿಟರೇಟ್ ಕೂಲಿಗಳು ಎಂದು ಏನು ಕರೆಯುತ್ತೇವೆಯೋ ಅವರು ಎಸ್ಟಿಮೇಟಿನ ಎರಡು ಪರ್ಸೆಂಟ್‌ನಲ್ಲಿ ನೇಮಕರಾದವರು, ಇವರು ಬಿ. ಎ ಬಿಎಸ್‌ಸಿ ಪಾಸ್ ಮಾಡಿಕೊಂಡಿರುತ್ತಾರೆ. ಇವರನ್ನು ನೇಮಕಮಾಡಲಿಕ್ಕಾಗುವುದಿಲ್ಲ ಮಾನ್ಯ ಸದಸ್ಯರು ಸರ್ಕಾರದೊಂದಿಗೆ ಸಹಕಾರ ಮಾಡಬೇಕು. ಈ ಹುಡುಗರಿಗೆ ಸರ್ಕಾರದಲ್ಲಿ ಬೇರೆ ಬೇರೆ ಕೆಲಸಗಳನ್ನು ಕೊಡತಕ್ಕ ಕಾಲದಲ್ಲಿ ಇವರು ಅರ್ಜಿ ಹಾಕಿಕೊಂಡು ಹುದ್ದೆಗಳನ್ನು ಪಡೆಯಬೇಕಾಗುತ್ತದೆ. ಈ ವಿಷಯದಲ್ಲಿ ನಾವು ನಿರ್ಣಯವನ್ನು ತೆಗೆದುಕೊಳ್ಳುವುದು ಸ್ವಲ್ಪ ಕಷ್ಟವಾಗುತ್ತದೆ. ಆದರೂ ಸಹ ಇವರ ಬಗ್ಗೆ ಸರ್ಕಾರಕ್ಕೆ ಸಹಾನುಭೂತಿ ಇದೆಯೆಂದು ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಐದು ವರ್ಷಗಳ ಮೇಲ್ಪಟ್ಟು ಇಲಾಖೆಯಲ್ಲಿ ಯಾರು ಕೆಲಸಮಾಡಿದ್ದಾರೋ ಅಂಥವರ ಬಗ್ಗೆ ಇಲಾಖೆಯಲ್ಲಿ ಯಾರು ಕೆಲಸಮಾಡಿದ್ದಾರೋ ಅಂಥವರ ಬಗ್ಗೆ ಇಲಾಖೆಯಲ್ಲಿ ಮುಂದೆ ಬರಬೇಕಾದ ಹುದ್ದೆಗಳು ಏನು ಇವೆಯೋ ಆ ಹುದ್ದೆಗಳನ್ನು ಭರ್ತಿ ಮಾಡತಕ್ಕ ಕಾಲದಲ್ಲಿ ಎಷ್ಟು ದಿವಸ ಇವರು ಕೆಲಸ ಮಾಡಿದ್ದಾರೋ ಅಷ್ಟು ದಿವಸವನ್ನು ಕೂಡಿಸಿ ಅವರ ವಯಸ್ಸಿನ ಗರಿಷ್ಠ ಮಿತಿಯನ್ನು ಸಡಿಲ ಮಾಡುವುದಕ್ಕೋಸ್ಕರ ಅವಕಾಶ ಕೊಟ್ಟು ೫೦ ಪರ್ಸೆಂಟ್ ಹುದ್ದೆಗಳನ್ನು ಅವರಿಗೆ ಮೀಸಲಾಗಿಟ್ಟಿದ್ದೇವೆ. ಸರ್ಕಾರದ ನಿಯಮಾವಳಿಗಳ ಪ್ರಕಾರ ನೇಮಕ ಮಾಡತಕ್ಕದ್ದು ಈ ಒಂದು ಕೆಟಗರಿ ಮಾತ್ರ. ಸ್ಟೈಫೆಂಡರಿ ಗ್ರಾಜ್ಯುಯೇಟ್ಸ್ ವಿಷಯದಲ್ಲಿಯೂ ಸಹ ಇದನ್ನೇ ನಾವು ಮಾಡಿದ್ದೇವೆ. ಇವರಿಗೂ ೫೦ ಪರ್ಸೆಂಟ್ ಹುದ್ದೆಗಳನ್ನು ರಿಸರ್ವ್ ಮಾಡಿ ರೋಸ್ಟರ್ ವ್ಯಾಪ್ತಿಯಲ್ಲಿ ತಮ್ಮ ಅವಕಾಶವನ್ನು ಇವರು ಪಡೆದುಕೊಳ್ಳಬೇಕು. ೧-೪-೮೨ ರ ಪೂರ್ವದಲ್ಲಿ ಯಾರು ಕೆಲಸದಲ್ಲಿದ್ದರೋ ಅವರನ್ನು ಕೆಲಸದಿಂದ ತೆಗೆಯುವುದಿಲ್ಲ. ಇಲಾಖೆಯಲ್ಲಿ ವೇಕೆನ್ಸೀಸ್ ಬಂದಾಗ ಇವರನ್ನು ನೇಮಕಮಾಡಿಕೊಳ್ಳಬೇಕಾಗುತ್ತದೆ. ಸ್ವೀಡಿಗಳನ್ನು ಕನ್‌ಫರ್ಮ್ ಮಾಡತಕ್ಕದ್ದರಲ್ಲಿ ತಕರಾರು ಇಲ್ಲ. ಗ್ಯಾಂಗ್ ಕೂಲಿಗಳನ್ನು ಕನ್‌ಫರ್ಮ್ ಮಾಡತಕ್ಕದ್ದರಲ್ಲಿ ತಕರಾರು ಇಲ್ಲ. ಆದರೆ ಬೇರೆ ಬೇರೆ ಕೆಟಗರಿಯನ್ನು ಕನ್‌ಫರ್ಮ್ ಮಾಡತಕ್ಕದ್ದರಲ್ಲಿ ವಿಶೇಷವಾಗಿ ನಾವು ಹುದ್ದೆಗಳನ್ನು ನಿರ್ಮಾಣ ಮಾಡಬೇಕಾಗುತ್ತದೆ ಮತ್ತು ಅದಕ್ಕೆ ಮಂಜೂರಾತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ ಈ ಬಿ. ಎ. ಬಿ. ಎಸ್. ಸಿ. ಹುಡುಗರು ಏನು ಇದ್ದಾರೆ, ವರ್ಕ್ ಚಾರ್ಜ್ ಎಸ್ಟಿಮೇಟಿನ ಎರಡು ಪರ್ಸೆಂಟ್ ಕಾಸ್ಟ್‌ನ ವ್ಯಾಪ್ತಿಯಲ್ಲಿ ಯಾರು ಬರುತ್ತಾರೆ ಅವರನ್ನು ಖಾಯಂ ಮಾಡತಕ್ಕದ್ದರಲ್ಲಿ ತೊಂದರೆ ಇದೆ ಮಾನ್ಯ ಸದಸ್ಯರುಗಳಿಗೆ ಸ್ಟೈಫೆಂಡರಿ ಗ್ರಾಜುಯೇಟ್ಸ್ ವಿಷಯದಲ್ಲಿ ಏನಾಯಿತು ಎನ್ನುವುದು ಮತ್ತು ಇವರು ಹೈಕೋರ್ಟಿಗೆ ಹೋಗಿ ರಿಟ್ ಹಾಕಿದ್ದು ಗೊತ್ತಿದೆ. ನಾವು ಈ ಸಂಬಂಧದಲ್ಲಿ ಸರಿಯಾದ ನಿಯಮಗಳನು ಗಮನದಲ್ಲಿಟ್ಟುಕೊಂಡು ಇವರ ವಿಷಯವನ್ನು ತೀರ್ಮಾನಮಾಡಬೇಕಾಗಿರುತ್ತದೆ. ಆದ್ದರಿಂದ ಇಲಾಖೆಯಲ್ಲಿ ಹುದ್ದೆಗಳು ಏನು ಬರುತ್ತವೆ ಅವುಗಳಲ್ಲಿ ೫೦ ಪರ್ಸೆಂಟ್ ಹುದ್ದೆಗಳನ್ನು ಭರ್ತಿ ಮಾಡುವಾಗ ಐದು ವರ್ಷಕ್ಕೆ ಮೇಲ್ಪಟ್ಟು ಯಾರು ಕೆಲಸ ಮಾಡಿರುತ್ತಾರೋ ಅಂಥವರಿಗೆ ಅವಕಾಶಕೊಡುತ್ತೇವೆ. ಎಲ್ಲಾ ವ್ಯಾಪ್ತಿಯಲ್ಲಿಯೂ ಇವರು ಕೆಲಸಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಆ ಮೇಲೆ ಇಲಾಖೆಯಲ್ಲಿ ಕೆಲವು ಅಸಿಸ್ಟೆಂಟ್ ಇಂಜಿನಿಯರ್ಸ್, ಜೂನಿಯರ್ ಇಂಜಿನಿಯರ್ಸ್, ಡ್ರಾಫ್ಟ್ಸ್‌ಮನ್ಸ್. ಟ್ರೇಸರ್ಸ್, ಮೊದಲನೇ ದರ್ಜೆಯ ಗುಮಾಸ್ತರು, ಎರಡನೇ ದರ್ಜೆಯ ಗುಮಾಸ್ತರು ಸ್ಟೆನೋಗ್ರಾಫರ್ಸ್, ಟೈಪಿಸ್ಟ್ಸ್ ಇದ್ದಾರೆ. ಇವರಲ್ಲಿ ಕೆಲವರು ಕಳೆದ ಹತ್ತು ವರ್ಷಗಳಿಂದಲೂ ಕೆಲಸಮಾಡಿಕೊಂಡಿರುತ್ತಾರೆ. ಇವರು ಇನ್‌ಕ್ರಿಮೆಂಟ್ಸ್ ಪಡೆದಿರುತ್ತಾರೆ, ಮತ್ತು ಇವರ ನೇಮಕಾತಿಯನ್ನು ಮಾಡುವಾಗ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಿಂದ ನಂಬರನ್ನು ತರಿಸಿಕೊಂಡು ಕ್ರಮಬದ್ಧವಾಗಿ ಮಾಡಿರುತ್ತಾರೆ. ಸರ್ಕಾರದ ನಿಯಮಕ್ಕೆ ತಕ್ಕಂತೆ ಇವರು ನೇಮಕ ಹೊಂದಿರುತ್ತಾರೆ. ಇವರನ್ನು ನಾವು ಇನ್ನೂ ಹೆಚ್ಚಾಗಿ ನೌಕರರಾಗಿ ಕರೆದುಕೊಂಡು ಬಂದಿದ್ದೇವೆ. ಇಂಥವರನ್ನು ಸರ್ಕಾರದವರು ಖಾಯಂ ಮಾಡಬೇಕು ಎನ್ನತಕ್ಕದ್ದನ್ನು ಮನಗಂಡು ಕ್ಯಾಬಿನೆಟ್ ಉಪಸಮಿತಿಯ ಮುಂದೆ ಈ ವಿಷಯವನ್ನು ಇಟ್ಟಿದ್ದೇವೆ. ಇದರ ಬಗ್ಗೆ ಅತಿ ಶೀಘ್ರವಾಗಿ ಕ್ರಮ ತೆಗೆದು ಕೊಳ್ಳುತ್ತೇವೆ.

ಇದರ ಬಗ್ಗೆ ಯಾರೂ ಕೂಡ ಕಾಳಜಿ ಪಡಬೇಕಾಗಿಲ್ಲ, ಬಿ. ಎ, ಬಿ. ಎಸ್. ಸಿ. ಮಾಡಿಕೊಂಡು ವರ್ಕ್‌ಚಾರ್ಜ್‌ನಲ್ಲಿರುವವರನ್ನು ರೆಕ್ರೂಟ್‌ಮೆಂಟ್‌ನಲ್ಲಿರುವವರನ್ನು ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ನೇಮಕ ಮಾಡಿಕೊಡಬೇಕಾಗುತ್ತದೆ. ಇರುವ ೩೨,೮೫೮ ಜನರಲ್ಲಿ ಯಾರನ್ನೂ ನಾವು ಹೊರಗೆ ಕಳಿಂಹಿಸುವುದಿಲ್ಲ, ೨೨–೨೩ ಸಾವಿರ ಜನರನ್ನು ಖಾಯಂ ಮಾಡುತ್ತೇವೆ. ಮೂರನೆಯ ವರ್ಗದ ಜನರಿಗೆ ಮಾತ್ರ ಬೊಸ ಸ್ಪೆಷಲ್ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಿ ಇಲಾಖೆಯಲ್ಲಿರತಕ್ಕ ೫೦ ಪರ್ಸೆಂಟ್ ಹುದ್ದೆಗಳನ್ನು ವೀಸಲಾಗಿಟ್ಟು ಈ ವ್ಯಾಪ್ತಿಯಲ್ಲಿ ಇವರಿಗೂ ಅವಕಾಶ ಕಲ್ಪಿಸಿಕೊಡಬೇಕು ಎಂದು ಯೋಚಿಸಿದ್ದೇವೆ. ಆದ್ದರಿಂದ ಈ ಸಂದರ್ಭದಲ್ಲಿ ಉಪವಾಸ ಸತ್ಯಾಗ್ರಹ ಏನು ಮಾಡುತ್ತಿದ್ದಾರೆ ಅವರು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆಂದು ತಿಳಿದು ಇದಕ್ಕೂ ಒಂದು ಕಮಿಟಿಯನ್ನು ಮಾಡಿದ್ದೇವೆ. ಇಲ್ಲಿ ನಾನು ಯಾರ ಬಗ್ಗೆಯೂ ದೋಷಾರೋಪ ಮಾಡಲಿಕ್ಕೆ ಹೋಗುವುದಿಲ್ಲ. ಇತ್ತೀಚೆಗೆ ವಿರೋಧ ಪಕ್ಷದ ಮುಖಂಡರನ್ನು ಕರೆಯಿಸಿ, ಅವರೊಡನೆ ವಿಷಯವನ್ನು ಚರ್ಚೆ ಮಾಡಿ ಕಳೆದ ಎರಡು ತಿಂಗಳಿಂದ ಪ್ರಯತ್ನ ಮಾಡಿದ್ದರಿಂದ ಇದಕ್ಕೆ ಒಂದು ಸ್ವರೂಪ ಈಗ ಬಂದಿದೆ. ಸಂಬಂಧಪಟ್ಟ ಕಾರ್ಯದರ್ಶಿಗಳು ಇದಕ್ಕೆ ಏನಾದರೂ ಒಂದು ಸ್ವರೂಪ ಕೊಡಬೇಕು, ಕೆಲವು ನಿರ್ಣಯಗಳನ್ನು ತೆಗೆದುಕೊಂಡಿದ್ದಾರೆ. ಇದರ ಬಗ್ಗೆ ನಮಗೆ ಆಸಕ್ತಿ ಇದೆ ಎನ್ನುವುದನ್ನು ಮಾತ್ರ ತಾವು ಅರ್ಥಮಾಡಿಕೊಳ್ಳಬೇಕು. ದಯಂ ಮಾಡಿ ಎಲ್ಲರೂ ಈ ವಿಷಯದಲ್ಲಿ ಸರ್ಕಾರಕ್ಕೆ ಸಹಕಾರಮಾಡಬೇಕು. ಎಂದು ನಾನು ಕೇಳಿ ಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ—ತಮ್ಮ ಈ ನಿರ್ಧಾರ ನೀರಾವರಿ ಇಲಾಖೆಗೂ ಅಪ್ಲೈ ಆಗುತ್ತದೆಯೇ ?

ಅಧ್ಯಕ್ಷರು—ತಾವು ಈ ವಿಷಯದಲ್ಲಿ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆದಿದ್ದೀರಿ ಮತ್ತೆ ಕ್ಲಾರಿಫಿಕೇಷನ್ಸ್ ಕೇಳಬೇಕು ಎಂದರೆ ಹೇಗೆ ?

ಶ್ರೀ ಎಸ್. ಸೂರ್ಯನಾರಾಯಣರಾವ್—ಸ್ಪೈಪೆಂಡರಿ ಗ್ರಾಜುಯೇಟ್ಸ್ ಅನ್ನು ತೆಗೆದುಕೊಂಡು ದೇಶದಲ್ಲಿ ನಿರುದ್ಯೋಗಿ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ಸರ್ಕಾರದವರು ಅನುಕೂಲ ಮಾಡಿದ್ದರು ಆದರೆ ಈ ಇಲಾಖೆಯಲ್ಲಿ ಕೆಲಸದ ಅಗತ್ಯ ಇದ್ದುದರಿಂದ ಇವರನ್ನು ಕೆಲಸಕ್ಕೆ ತೆಗೆದುಕೊಂಡಿದ್ದರು. ಎರಡನೆಯದಾಗಿ, ಇಲಾಖೆ ದೊಡ್ಡದು ಇಲ್ಲಿ ಸ್ಯಾಂಕ್ಷನ್ ಪೋಸ್ಟ್ಸ್ ಬಹಳ ಕಡಿಮೆ ಇವೆ. ಇದನ್ನು ಮಾನ್ಯಮಂತ್ರಿಗಳೂ ಒಪ್ಪುತ್ತಾರೆ. ನಾನು ಇಲ್ಲಿ ಸರ್ಕಾರಕ್ಕೆ ಕೇಳಿಕೊಳ್ಳುವುದೇನೆಂದರೆ ಇಲಾಖೆಯಲ್ಲಿ ಎಷ್ಟು ಪೋಸ್ಟ್ಸ್ ಅಗತ್ಯವಿದೆಯೋ ಅಷ್ಟನ್ನು ಸ್ಯಾಂಕ್ಷನ್ ಮಾಡಿಸಿ, ಇವುಗಳನ್ನು ಪಿ. ಎಸ್.ಸಿಗೆ ಕಳಿಂಹಿಸದೇ ಇಲಾಖೆಯಲ್ಲಿಯೇ ಭರ್ತಿಮಾಡುವುದಕ್ಕೆ ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳುತ್ತಾರೆಯೇ? ಇಲ್ಲದಿದ್ದರೆ ಹತ್ತು ವರ್ಷಗಳಿಂದ ಇಲಾಖೆಯಲ್ಲಿ ಕೆಲಸ ಮಾಡಿದವರಿಗೆ ಬಹಳ ತೊಂದರೆ ಯಾಗುತ್ತದೆ. ಸಾಕಷ್ಟು ಹುದ್ದೆಗಳನ್ನು ಸ್ಯಾಂಕ್ಷನ್ ಮಾಡಿ ನೇಮಕಾತಿ ಮಾಡುವುದನ್ನು ಇಲಾಖೆಯವರೇ ಮಾಡುವುದಕ್ಕೆ ಅವಕಾಶ ಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿ ಕೊಳ್ಳುತ್ತಿದ್ದೇನೆ.

ಅಧ್ಯಕ್ಷರು—ಮಾನ್ಯ ಮಂತ್ರಿಗಳು ಸವಿಸ್ತಾರವಾಗಿ ಉತ್ತರ ಹೇಳಿದ್ದಾರೆ. ಪುನಃ ಅವರನ್ನು ಒತ್ತಾಯಮಾಡಬೇಡಿ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಸದನದ ಕಾಲವನ್ನು ಅನಾವಶ್ಯಕವಾಗಿ ವ್ಯಯ ಮಾಡುವುದಿಲ್ಲ ಎಂದು ಅವರು ಹೇಳಲಿ.

ಶ್ರೀ ಎಚ್.ಡಿ. ದೇವೇಗೌಡ.—ಮೊದಲನೇ ದರ್ಜೆ. ಗುಮಾಸ್ತರು, ಎರಡನೇ ದರ್ಜೆ ಗುಮಾಸ್ತರು ಸ್ಟೆನೋಸ್, ಟೈಪಿಸ್ಟ್‌ಗಳ ಇಷ್ಟನ್ನು ನಿಯಮಗಳ ಪ್ರಕಾರ ಮಾಡುತ್ತೇವೆ, ಎಕ್‌ಸ್ಟ್ರಾ ಮಾಡುವುದಿಲ್ಲ, ೪ ಜನ ಬೇಕಾದ ಕಡೆ ೪೦ ಜನರನ್ನು ನೇಮಕ ಮಾಡುವುದಿಲ್ಲ, ವ್ಯಾಪ್ತಿಯಲ್ಲಿ ಎಷ್ಟು ಮಂಜೂರಾತಿ ಕೊಡಲಿಕ್ಕೆ ಸಾಧ್ಯವೋ ಅಷ್ಟು ಮಾತ್ರ ಮಾಡುತ್ತೇವೆ, ತಡೆಹಿಡಿಯುವುದಿಲ್ಲ. ಇದರಲ್ಲಿ ೫–೬ ಸಾವಿರ ಜನ ಬರುತ್ತಾರೆ, ಅವರನ್ನೆಲ್ಲಾ ಒಂದೇ ಸಾರಿ ಭರ್ತಿಮಾಡುವುದಕ್ಕೆ ಆಗುವುದಿಲ್ಲ. ಜಜ್ಞಾಸೆ ಯಾವುದರಲ್ಲೂ ಇಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ಸಿರಸಿ ಬಸ್ ಸ್ಟಾಂಡನ್ನು ಊರಿನ ಹೊರಗೆ ಹಾಕಬೇಕು ಎಂದು ಪ್ರಯತ್ನ ಮಾಡುತ್ತಿದ್ದಾರೆ. ಇದರ ಬಗ್ಗೆ ಜನರು ಸ್ಟೈಕ್ ಮಾಡುತ್ತಿದ್ದಾರೆ. ಆ ಬಸ್ ಸ್ಟಾಂಡ್ ಅಲ್ಲೇ ಇರಬೇಕೆಂಬ ಬೇಡಿಕೆ ಇದೆ. ಆದ್ದರಿಂದ ಸಿರಸಿ ಬಸ್ ಸ್ಟಾಂಡ್ ಅದೇ ಜಾಗದಲ್ಲಿ ಇರಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಇದರ ಬಗೆ ನೋಟೀಸ್ ಕೊಡಿ.

ಶ್ರೀ ಕೆ. ಶಿವಮೂರ್ತಿ.—ನಾನು ಚಿತ್ರದುರ್ಗ ಜಿಲ್ಲೆಯ ಜನತಾ ಮನೆಗಳ ಬಗ್ಗೆ ಒಂದು ನೋಟೀಸ್ ಕಳಿಸಿದ್ದೇನೆ. ಅರ್ಧಂಬರ್ಧ ಕಟ್ಟಿರುವ ಜನತಾ ಮನೆಗಳು ಮಳೆಯಿಂದಾಗಿ ಬಿದ್ದು ಹೋಗಿವೆ. ಇದಕ್ಕಾಗಿ ಚಿತ್ರದುರ್ಗಾ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ನಾಲ್ಕೈದು ದಿವಸಗಳಿಂದ ಧರಣಿ ಸತ್ಯಾಗ್ರಹ ಮಾಡುತ್ತಾ ಇದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ, ಅವರು ಉತ್ತರ ಹೇಳಲಿ. ನೂರಾರು ಜನ ಬಡವರು ಸತ್ಯಾಗ್ರಹ ಕುಳಿತಿದ್ದಾರೆ.

ಅಧ್ಯಕ್ಷರು.—ಅದು ನನ್ನ ಹತ್ತಿರ ಇಲ್ಲ.

ಶ್ರೀ ಎಸ್. ಬಂಗಾರಪ್ಪ :—ಅದೇ ವಿಚಾರದಲ್ಲಿ ನಾನೂ ಕೂಡ ಅರ್ಜಿಮಾಡಿ ನೋಟೀಸ್ ಕಳಿಸಿದ್ದೇನೆ. ಅಲ್ಲಿ ಮಂಳೆ ಜಾಸ್ತಿ ಬಂದು ಅರ್ಧಂಬರ್ಧ ಕಟ್ಟಿರುವ ಮನೆಗಳೆಲ್ಲಾ ಬಿದ್ದುಹೋಗಿವೆ. ಇದುಲ್ಲಿ ಸರ್ಕಾರದ ಜವಾಬ್ದಾರಿ ಬರುತ್ತದೆ.

ಅಧ್ಯಕ್ಷರು.—ಯಾವುದಾದರೂ ನಿಯಮ ಬೇಡವೇ.

ಶ್ರೀ ಎಸ್. ಬಂಗಾರಪ್ಪ.—ನೋಟೀಸ್ ಕೊಟ್ಟು ನಾಲ್ಕೈದು ದಿವಸಗಳಾಯಿತು, ಸಾವಿರಾರು ಜನ ಸತ್ಯಾಗ್ರಹ ಮಾಡುತ್ತಿದ್ದಾರೆ.

ಅಧ್ಯಕ್ಷರು.—ನಿಯಮವು ಸಿಸಿಳರ ಕೆಳಗೆ ಚರ್ಚೆ ಮಾಡಿದಿರಿ. ಈಗ ಬೇರೆಯವರಿಗೆ ಅವಕಾಶ ಕೊಡಬೇಕೋ ಬೇಡವೋ.

ಶ್ರೀ ಎಸ್. ಬಂಗಾರಪ್ಪ.—ಇದನ್ನು ಆಮೇಲೆ ತೆಗೆದುಕೊಳ್ಳಿ.

ಅಧ್ಯಕ್ಷರು.—ಇವತ್ತು ಇಲ್ಲ.

ಶ್ರೀಎಸ್. ಬಂಗಾರಪ್ಪ.—ಸಂಬಂಧಪಟ್ಟ ಮಂತ್ರಿಗಳಿದ್ದಾರೆ, ನೋಟೀಸ್ ಕಳಿಸಿ ನಾಲ್ಕೈದು ದಿವಸ ಆಯಿತು, ಇದರ ಬಗ್ಗೆ ಸೋಮವಾರ ಹೇಳಿಕೆ ಕೊಡುತ್ತೇವೆ ಅಂದರೂ ಸಾಕು.

MR. SPEAKER.—I have not received notice under 334. I don't allow this.

(INTERRUPTIONS)

MR. SPEAKER.—How can we run this House.....

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರು ಆಮೇಲೆ ತೆಗೆದುಕೊಳ್ಳೋಣ ಅಂದರೆ ನಮ್ಮ ಅಭ್ಯಂತರವಿಲ್ಲ.

MR. SPEAKER.—I want matter under ruld 334 to be finished.

ಶ್ರೀ ಬಿ.ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೆ,ಬೆಂಗಳೂರು ಡೈರಿಯಲ್ಲಿ ಮುಷ್ಕರ ನಡೆದು ಬೆಂಗಳೂರಿನ ನಾಗರೀಕರಿಗೆ ಹಾಲು ಸರಬರಾಜು ಮಾಡುವುದರಲ್ಲಿ ತೊಂದರೆಯಾಗಿದೆ. ಬೆಂಗಳೂರು ಡೈರಿಯ ಕೆಲಸಗಾರರ ಮತ್ತು ಲೋಡರ್ಸ್ ನಡುವೆ ವೈಷಮ್ಯ ಬಂದು ಜಗಳ ಆಡಿ ಹಾಲಿನ ಸರಬರಾಜನ್ನು ಪೂರ್ತಿಯಾಗಿ ನಿಲ್ಲಿಸಿದ್ದಾರೆ. ಇದರಿಂದ ಬಹುಶಃ ಸರ್ಕಾರಕ್ಕೂ ಹಾನಿಯಾಗಿದೆ. ನಾಗರೀಕರಿಗೂ ತೊಂದರೆಯಾಗಿದೆ. ಆದ್ದರಿಂದ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಿದರೆ ಬಹಳ ಒಳ್ಳೆಯದು.

ಶ್ರೀ ಎ. ಲಕ್ಷ್ಮೀಸಾಗರ್.—ಈಗ ಹತ್ತಾತ್ನನೆ ಸಿಸಿಳನೇ ನಿಯಮದ ಪ್ರಕಾರ ನೋಟೀಸ್ ಕಳಿಸಿ ಹೇಳಬೇಕು ಅಂದರೆ ಹೇಗೆ. ನಿನ್ನೆ ಇಲ್ಲಿ ಪ್ರಸ್ತಾಪಮಾಡಿದಹಾಗೆ ಇವತ್ತು ೧೧ ಗಂಟೆಗೆ ಕಳಿಸಿದ್ದೇವೆ ಎನ್ನುತಕ್ಕ ಮಾತುಗಳೆಲ್ಲಾ ಬಂದಿವೆ. ಸರ್ಕಾರ ಕೆಲಸ ಮಾಡಬೇಕಾದ್ದೆನ್ನು ತಾವೂ ತಿಳಿದುಕೊಂಡಿದ್ದೀರಿ, ಅವರು ನೋಟೀಸ್ ಕಳಿಸಲಿ, ಸಂಬಂಧಪಟ್ಟ ಮಾಹಿತಿಯನ್ನು ತರಿಸುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಬೆಂಗಳೂರಿನ ನಾಗರೀಕರಿಗೆ ತೊಂದರೆಯಾಗಿದೆ. ಇದರ ಬಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಲಿಲ್ಲ, ಸುಮ್ಮನೆ ಕುಳಿತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಂತ್ರಿಗಳು ಸಂಮ್ಮನೆ ಕುಳಿತಿದ್ದಾರೆ. ಉತ್ತರ ಹೇಳಲಿಲ್ಲ ಅಂದರೆ ಸರ್ಕಾರ ಕೆಲಸ ಮಾಡುವುದು ಹೇಗೆ. ಈಗಾಗಲೇ ನಾನು ಹೇಳಿದ್ದೇನೆ. ಇದರ ಬಗ್ಗೆ ತಮಗೆ ನೋಟೀಸ್ ಬರಲಿ. ಸಂಬಂಧಪಟ್ಟ ಮಾಹಿತಿಯನ್ನು ತರಿಸಿ, ವಿಚಾರಮಾಡಿ, ಈ ಸಭೆಗೆ ಒಂದು ಹೇಳಿಕೆ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಚಿತ್ರದುರ್ಗ ಜಿಲ್ಲೆಯ ಜನತಾ ಮನೆಗಳ ಬಗ್ಗೆ ಇವತ್ತು ಹೇಳಿಕೆ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ನೋಟೀಸ್ ಬರದೆ ಹೇಗೆ ಕಳಿಸುವುದು.

ಶ್ರೀ ಎಸ್. ಬಂಗಾರಪ್ಪ.—ನಾಲ್ಕೈದು ದಿವಸ ಟೈಂ ಕೊಟ್ಟಿದ್ದೇವೆ. ಇನ್ನೇನು ಐದಾರು ದಿವಸ ಟೈಂ ಕೊಡುವುದಕ್ಕಾಗುತ್ತದೆಯೇ ?

ಅಧ್ಯಕ್ಷರು.—ಇವತ್ತಿಗೆ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ನೀವು ಸೋಮವಾರ ಹೇಳಿಕೆ ಕೊಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಅದು ನನ್ನ ಕೈಗೆ ಬಂದಿಲ್ಲ. ಮಾನ್ಯ ಅಧ್ಯಕ್ಷರೂ ಕೂಡ ನನಗೆ ಬಂದಿಲ್ಲ ಎಂದು ಹೇಳುತ್ತಾ ಇದ್ದಾರೆ. ಇದರ ಬಗ್ಗೆ ನಾನು ಆದಷ್ಟು ಬೇಗ ಮಾಹಿತಿ ತರಿಸಿ, ಪೂರ್ಣವಾಗಿ ವಿಚಾರಮಾಡಿ ಈ ಸಭೆಗೆ ಒಂದು ಹೇಳಿಕೆ ಕೊಡುತ್ತೇನೆ. ಸೋಮವಾರ, ಮಂಗಳವಾರ ಎಂದು ಹೇಳಲಾರೆ.

ಶ್ರೀ ಕೆ.ಹೆಚ್. ರಂಗನಾಥ್.—ಇವತ್ತು ವರಮಹಾಲಕ್ಷ್ಮಿ ಹಬ್ಬವಿದೆ, ಹಬ್ಬ ಕಳೆದ ಮೇಲೆ ಹೇಳುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಹಬ್ಬಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರು ಈ ರೀತಿ ಲಘುವಾಗಿ ಭಾಷಣೆ ಮಾಡಬಾರದು, ಇದು ಸದನಕ್ಕೆ ಗೌರವ ತರುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವರಿಗೆ ಅಧಿಕಾರವಿದೆ, ಅದಕ್ಕೆ ಉತ್ತರ ಹೇಳುವುದಕ್ಕೆ ಫಡಿ, ನಿಮಿಷ ಫಿಕ್ಸ್ ಮಾಡಿದರೆ ಹೇಗೆ.

ಶ್ರೀ ಎಸ್. ಬಂಗಾರಪ್ಪ.—ನಮಗೆ ಬಹಳ ಕಷ್ಟವಾಗುತ್ತದೆ. ಹಾಗಾದರೆ ನಿಮಗೆ ಹಾಗೆಯೇ ಬಿಟ್ಟುಬಿಡಬೇಕಾ ? ೪೧ ಲಕ್ಷ ರೂಪಾಯಿಗಳನ್ನು ಕಳಿಸಿಕೊಡುವುದಕ್ಕಾಗದೇ ಸಾವಿರಾರು ಜನ ಧರಣಿ ಕುಳಿತಿದ್ದಾರೆ.

ಅಧ್ಯಕ್ಷರು.—ಈ ದಿವಸ ಇಲ್ಲ, ಕಳಿಸುವುದಕ್ಕೆ ಆಗಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಕ್ಷಮಿಸಬೇಕು, ನಾನು ಮೊದಲೇ ನೋಟೀಸ್ ಕಳಿಸಿಕೊಟ್ಟಿದ್ದೇನೆ.

ಶ್ರೀ ಕೆ. ಶಿವಮೂರ್ತಿ.—ಬಡವರು ಸಾವಿರಾರು ಜನ ಧರಣಿ ಕುಳಿತಿದ್ದಾರೆ, ಅರ್ಧಂಬರ್ಧ ಕಟ್ಟಿದ ಜನತಾ ಮನೆಗಳು ಮಳೆಯಿಂದ ಬಿದ್ದು ಹೋಗಿವೆ.

ಅಧ್ಯಕ್ಷರು.—ಈ ಲಿಸ್ಟ್‌ನಲ್ಲಿ ಗಮನ ಸೆಳೆಯುವ ಸೂಚನೆ ಎಂದು ಇದೆ,

ಶ್ರೀ ಎಸ್‌ಬಂಗಾರಪ್ಪ.—ಅದು ಹಿಂದು. ಮೊನ್ನೆ ತಡವಾಗಿ ೩೩ಳಿರ ಪ್ರಕಾರ ಮತ್ತೊಂದು ನೋಟೀಸ್‌ಕಳಿಸಿಕೊಟ್ಟಿದ್ದೇನೆ. ಸೋಮವಾರ ಹೇಳಿಕೆ ಕೊಡುತ್ತೇವೆ ಅಂದರೆ ಸಾಕು.

ಗಮನ ಸೆಳೆಯುವ ಸೂಚನೆ

ವಿಷಯ.—ಬಿ. ಇ. ಪದವೀಧರರ ಪರೀಕ್ಷೆ ತಡವಾಗಿ ನಡೆಯುತ್ತಿರುವ ಬಗ್ಗೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಬೆಂಗಳೂರು ವಿಶ್ವವಿದ್ಯಾನಿಲಯ ಮೊದಲನೇ ಮತ್ತು ಎರಡನೇ ವರ್ಷ ಇಂಜನಿಯರಿಂಗ್ ಪರೀಕ್ಷೆಗಳನ್ನು ನಡೆಸಲು ನಿಧಾನ ಮಾಡಿರುವುದರ ಬಗ್ಗೆ ಮಾನ್ಯ ವಿದ್ಯಾಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.